**ದಿನಾಂಕಃ 29.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಪ್ರತಿವಾದ ಪರ ವಕೀಲರಿಂದಃ-**

ದಾವಾ ಅನುಸೂಚಿ ಸ್ವತ್ತುಗಳು ಅಂದರೆ ನಿವೇಶನ ಸಂಖ್ಯೆ 9 ಮತ್ತು 17 ಅನ್ನು ಮೊದಲಬಾರಿಗೆ ನಾನು 2015 ರಲ್ಲಿ ನೋಡಿದ್ದೇನೆ. ನಾನು ನೋಡಿದಾಗ ನಿವೇಶನ ಸಂಖ್ಯೆ 9 ರಲ್ಲಿ 2 ಅಂಗಡಿಗಳು ಇದ್ದವು. 2 ಅಂಗಡಿಗಳಲ್ಲಿ ಒಂದರಲ್ಲಿ ಶ್ರೀರಾಮ ಎಂಬುವವನು ಇದ್ದ ಮತ್ತು ಇನ್ನೊಂದು ಖಾಲಿ ಇತ್ತು. 2 ಅಂಗಡಿಗಳಲ್ಲಿ ಮಂಜುನಾಥ ಅನ್ನುವವರು ಬಾಡಿಗೆಗೆ ಇದ್ದರು ಅನ್ನುವುದು ಸರಿಯಲ್ಲ. ಸಿಎಂಎಂ ಕೋರ್ಟ್ ನಲ್ಲಿ ಈ ಕೇಸಿನ ವಾದಿಗಳಾದ ನಮ್ಮ ಮೇಲೆ, ನಮ್ಮ ತಂದೆ ಕೆ ಎ ಚಂದ್ರರಾಜು, ಚಿಕ್ಕನಂಜುಂಡಪ್ಪ, ಮಂಜುನಾಥ ಮತ್ತು ಹಾಗೂ ಇತರರ ಮೇಲೆ ಸಿಸಿ ನಂ. 24787/2019 ರಂತೆ ಕ್ರಿಮಿನಲ್ ಕೇಸು ಇತ್ತು ಎಂದರೆ ಸಾಕ್ಷಿಯು ಯಾವುದೇ ಇಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಅದು ಕ್ಲಿಯರ್ ಆಗಿದೆ ಎಂದು ಹೇಳುತ್ತಾರೆ. ಸಿಸಿ ನಂ.24787/2019 ರ ಕೇಸು ಮುಕ್ತಾಯ ಆಗಿದೆ ಎಂದು ತೋರಿಸುವ ಬಗ್ಗೆ ದಾಖಲೆ ಹಾಜರುಪಡಿಸಬಹುದು, ಸಾಕ್ಷಿ ಸ್ವತಃ ಅದು 2017 ರ ಕೇಸು ಎಂದು ಹೇಳುತ್ತಾರೆ. ಸಿಸಿ ನಂ.24787/2019 ಈ ಕೇಸು ಪ್ರತಿವಾದಿ ಪಿಸಿಆರ್ ನಂ.8594/2017 ರಲ್ಲಿ ಸಲ್ಲಿಸಿದ ದೂರಿನ ಅನ್ವಯ ದಾಖಲಿಸಿಸಲಾಗಿದೆ ಅನ್ನುವ ಬಗ್ಗೆ ನನಗೆ ಗೊತ್ತಿಲ್ಲ.

ನಾನು ನನ್ನ ತಂದೆ ಮತ್ತು ಸಹೋದರರು ಹಾಗೂ ಇತರರು ಸೇರಿ ಪಿಸಿಆರ್ ನಂ.8594/2017 ಪ್ರಕರಣದ ಬಗ್ಗೆ ಕ್ರಿ.ಮಿಸ್ ನಂ.1188/2018 ರಂತೆ ಅರ್ಜಿ ಸಲ್ಲಿಸಿ ನಿರೀಕ್ಷಣಾ ಜಾಮೀನು ಆದೇಶ ಪಡೆದುಕೊಂಡಿದ್ದೇವೆ ಎನ್ನುವುದು ನಿಜ. ಸಿಸಿ ನಂ.24787/2019 ಕೇಸು 30 ನೇ ಎಸಿಎಂಎಂ ಕೋರ್ಟ್ ನಲ್ಲಿ ದಿಃ30.12.2024 ರಂದು ವಿಚಾರಣೆಗೆ ಇದೆ ಅನ್ನುವುದು ಸರಿಯಲ್ಲ. ಸದರಿ ಪ್ರಕರಣದಲ್ಲಿ ನಾವು ಹಾಜರಾಗದೇ ಇದ್ದ ಕಾರಣ ಕೋರ್ಟ್ ನಮ್ಮ ವಿರುದ್ಧ ವಾರಂಟ್ ಮತ್ತು ಉದ್ಘೋಷಣೆ ಹೊರಡಿಸಿದೆ ಅನ್ನುವುದು ಸರಿಯಲ್ಲ. ಸಿಸಿ ನಂ.24787/2019 ಪ್ರಕರಣವನ್ನು ಪ್ರತಿವಾದಿಯು ನಾನು ಹಾಜರುಪಡಿಸಿದ ನಿಪಿ.1 ಮತ್ತು 2 ಕ್ರಯಪತ್ರ ಹಾಗೂ ನಿಪಿ.5 ದಾನಪತ್ರಕ್ಕೆ ಸಂಬಂಧಿಸಿದಂತೆ ದಾಖಲಿಸಿದ್ದಾರೆ ಅನ್ನುವುದು ಸರಿಯಲ್ಲ.

ಚಿಕ್ಕನಂಜುಂಡಪ್ಪ ರವರು ನಿವೇಶನ ಸಂಖ್ಯೆ 9 ಮತ್ತು 17ರ ಬಗ್ಗೆ ದಿಃ14.12.2015 ರಂದು ಕ್ರಯಪತ್ರ ಬರೆದುಕೊಟ್ಟಿದ್ದಾರೆ. ಚಿಕ್ಕ ನಂಜುಂಡಪ್ಪ ಇವರು ಪ್ರತಿವಾದಿಯ ವಿರುದ್ಧ ಒಎಸ್ ನಂ.8630/2003 ರಂತೆ ನಿವೇಶನ ಸಂಖ್ಯೆ 9 ಮತ್ತು 17 ಕ್ಕೆ ಅವರೇ ಮಾಲೀಕರು ಎಂದು ಘೋಷಿಸಬೇಕು ಎಂದು ಕೇಳಿ ದಾವೆ ಸಲ್ಲಿಸಿದ್ದರು ಅನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಚಿಕ್ಕನಂಜುಂಡಪ್ಪ ಸಲ್ಲಿಸಿದ ದಾವೆ ಒಎಸ್ ನಂ.8630/2003 ದಿಃ01.12.2011 ರಂದು ವಜಾ ಆಗಿದೆ ಅನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಈಗ ಒಎಸ್ ನಂ.8630/2003 ರಲ್ಲಿನ ವಾದಪತ್ರದ ದೃಢೀಕೃತ ನಕಲನ್ನು ತೋರಿಸಿ ಸದರಿ ವಾದ ಪತ್ರದ ಶೆಡ್ಯೂಲ್ ಆಸ್ತಿ ಚಿಕ್ಕಬೊಮ್ಮಸಂದ್ರ ಗ್ರಾಮದ ಆಸ್ತಿ ನಂಬರ್ ನಂ.9 ಮತ್ತು 17, ಖಾತಾ ನಂ.1308 ಇರುತ್ತದೆ ಎಂದು ತೋರಿಸಿದಾಗ ಸಾಕ್ಷಿ ಆ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಪಿ.6 ಉತ್ತರ ಪತ್ರ ಮತ್ತು ನಿಪಿ.7 ಖಾತಾ ಸರ್ಟಿಪಿಕೇಟ್ ಪ್ರಕಾರ ಆಸ್ತಿಯ ನಂಬರ್ 1352/1308/9/17 ಎಂದು ನಮೂದು ಇದೆ ಅನ್ನುವುದು ನಿಜ. ನಿಪಿ.6 ಮತ್ತು 7 ರಲ್ಲಿ ಇರುವ ಆಸ್ತಿ ಮತ್ತು ಒಎಸ್ ನಂ.8630/2003 ರಲ್ಲಿನ ಆಸ್ತಿ ಒಂದೇ ಇರುತ್ತದೆ ಎಂದರೆ ಸಾಕ್ಷಿಯು ಸುಳ್ಳು ಎಂದು ಹೇಳುತ್ತಾರೆ.

ಈಗ ನನಗೆ ತೋರಿಸಿದ The Malleswarm Tailoring Co-operative Ltd ಇವರು ನೀಡಿದ 2 ಪೊಸೆಷನ್ ಸರ್ಟಿಪಿಕೇಟ್‌ನ ದೃಢೀಕೃತ ನಕಲಿನ ಪ್ರಕಾರ ಅದು ಸೈಟ್ ನಂಬರ್ 9 ಮತ್ತು 10 ಹಾಗೂ 16 ಮತ್ತು 17 ಕ್ಕೆ ಸಂಬಂಧಿಸಿದು ಎಂದರೆ ಸಾಕ್ಷಿಯು ಅದು ಸುಳ್ಳು ದಾಖಲೆ ಎಂದು ಹೇಳುತ್ತಾರೆ. ಚಿಕ್ಕನಂಜುಂಡುಪ್ಪನವರು ಪ್ರತಿವಾದಿಯ ವಿರುದ್ಧ ಸಲ್ಲಿಸಿದ ದಾವೆ ವಜಾ ಆಗಿದ್ದನ್ನು ಪ್ರಶ್ನಿಸಿ ಚಿಕ್ಕನಂಜುಂಡಪ್ಪ ಮೇಲ್ಮನವಿ ಸಲ್ಲಿಸಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸದರಿ ಚಿಕ್ಕನಂಜುಂಡಪ್ಪನವರು ಒಎಸ್ ನಂ.8630/2003 ರ ತೀರ್ಪನ್ನು ಪ್ರಶ್ನಿಸಿ ಸಲ್ಲಿಸಿದ ಆರ್ ಎಫ್ ಎ 1382/2012 ಅನ್ನು ನಡೆಸದೇ ದಿಃ02.09.2013 ರಂದು ವಾಪಾಸ್ಸು ಪಡೆದಿದ್ದಾರೆ ಅನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಒಎಸ್ ನಂ.8630/2003 ದಾವೆ ವಜಾ ಆದ ನಂತರ ಚಿಕ್ಕನಂಜುಂಡಪ್ಪರವರಿಗೆ ದಾವಾ ಆಸ್ತಿಗಳ ಮೇಲೆ ಯಾವುದೇ ಹಕ್ಕು, ಅಧಿಕಾರ ಇಲ್ಲದೇ ಇದ್ದರೂ ಕೂಡ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ನನ್ನ ತಂದೆಯೊಂದಿಗೆ ಶಾಮೀಲಾಗಿ ನಿಪಿ.1 ಮತ್ತು 2 ಕ್ರಯಪತ್ರಗಳನ್ನು ಸೃಷ್ಟಿಸಿದ್ದಾರೆ ಅನ್ನುವುದು ಸರಿಯಲ್ಲ. ಚಿಕ್ಕನಂಜುಂಡಪ್ಪ ಪ್ರತಿವಾದಿ ರಾಮಪ್ಪ ಅವರ ಅಕ್ಕನ ಮುನಿಯಮ್ಮ ಇವರ ಗಂಡ

ಅನ್ನುವುದು ನನಗೆ ಗೊತ್ತಿಲ್ಲ. ಚಿಕ್ಕನಂಜುಂಡಪ್ಪರವರಿಗೆ ದಾವಾ ಆಸ್ತಿಗಳ ಮೇಲೆ ಯಾವುದೇ ಹಕ್ಕು ಬಾಧ್ಯತೆ ಇಲ್ಲದೇ ಇದ್ದರೂ ಕೂಡ ನಮ್ಮ ತಂದೆಯ ಪರವಾಗಿ ಸೃಷ್ಟಿಸಿದ ನಿಪಿ.1 ಮತ್ತು 2 ಕ್ರಯಪತ್ರ ಪ್ರಕಾರ ನನ್ನ ತಂದೆಗೆ ದಾವಾ ಅನುಸೂಚಿ ಸ್ವತ್ತುಗಳ ಮೇಲೆ ಯಾವುದೇ ಹಕ್ಕು ಪ್ರಾಪ್ತವಾಗಿಲ್ಲ ಎನ್ನುವು ಸರಿಯಲ್ಲ. ನನ್ನ ತಂದೆಗೆ ದಾವಾ ಅನುಸೂಚಿ ಆಸ್ತಿಗಳ ಮೇಲೆ ಯಾವುದೇ ಹಕ್ಕು ಪ್ರಾಪ್ತವಾಗಿಲ್ಲದೇ ಇದ್ದರೂ ಕೂಡ ನಿಪಿ.5 ಅನ್ನು ಸೃಷ್ಟಿ ಸಲಾಗಿದೆ ಅನ್ನುವುದು ಸರಿಯಲ್ಲ. ಚಿಕ್ಕನಂಜುಂಡಪ್ಪ, ನನ್ನ ತಂದೆ ಹಾಗೂ ನನಗೆ ನಿಪಿ.1, 2 ಮತ್ತು 5 ಅನ್ನು ಯಾವುದೇ ಹಕ್ಕು ಬಾಧ್ಯತೆ ಇಲ್ಲದೇ ಇದ್ದರೂ ಸೃಷ್ಟಿಸಿದ ಕಾರಣ ಪ್ರತಿವಾದಿಯು ಸಿಸಿ ನಂಬರ್ 24787/2019 ರಂತೆ ಪ್ರಕರಣ ದಾಖಲಿಸಿದ್ದಾರೆ ಅನ್ನುವುದು ಸರಿಯಲ್ಲ.

ನಾನು ನಿರೀಕ್ಷಣಾ ಜಾಮೀನು ಪಡೆದ ಮೇಲೆ ಹೇಳಿದ ಕೇಸಿನಲ್ಲಿ ಮಂಜುನಾಥ ಕೂಡ ಆರೋಪಿಯಾಗಿದ್ದರು ಅನ್ನುವ ಬಗ್ಗೆ ನನಗೆ ಗೊತ್ತಿಲ್ಲ. ನೀರೀಕ್ಷಣಾ ಜಾಮೀನು ಪಡೆದ ಕೇಸನ್ನು ಯಾವಕಾರಣಕ್ಕಾಗಿ ಸಲ್ಲಿಸಿದ್ದಾರೆ ಎಂದು ತಿಳಿದುಕೊಂಡಿದ್ದೆನು. ಆ ರೀತಿ ನೀರಿಕ್ಷಣಾ ಜಾಮೀನು ಪಡೆದ ಕೇಸಿನಲ್ಲಿ ಮಂಜುನಾಥ 1 ನೇ ಆರೋಪಿ ಎಂದು ಗೊತ್ತಿದ್ದರೂ ಕೂಡ ಏನು ಗೊತ್ತಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಸದರಿ ಮಂಜುನಾಥ ಪ್ರತಿವಾದಿಯ ಬಳಿ ಟೆನಂಟ್ ಆಗಿದ್ದರು ಅನ್ನುವ ವಿಚಾರ ಗೊತ್ತಿದ್ದರೂ ಅದನ್ನು ಮರೆಮಾಚುವ ಸಲುವಾಗಿ ಆ ಬಗ್ಗೆ ಗೊತ್ತಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ. ಮುಂದಿನ ದಿನಾಂಕಕ್ಕೆ ಬರುವಾಗ ಸಿಸಿ ನಂ.24787/2019 ರ ಬಗ್ಗೆ ತಿಳಿದುಕೊಂಡು ಬರಬಹುದು.

**ಸಾಕ್ಷಿಯ ಮುಂದುವರೆದ ಪಾಟೀಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಪದ್ಮ ಪ್ರಸಾದ್ )**
**2 ನೇ ಅಪರ ನಗರ ಸಿವಿಲ್ ಮತ್ತು**
**ವಿಶೇಷ ನ್ಯಾಯಾಧೀಶರು, ಬೆಂಗಳೂರು ನಗರ.**